# ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ

**ಕಿತ್ತೂರ ಚನ್ನಮ್ಮಾ ನಗರ, ಸೋಲಾಪೂರ ರಸ್ತೆ, ವಿಜಯಪುರ.**

ನಂ.ಆಡಳಿತ/ಸಭೆ/ 5946/2024
ವಿಜಯಪುರ, ದಿನಾಂಕ:13-08-2024

## ವಾರ್ಷಿಕ ಸರ್ವ ಸಾಧಾರಣ ಸಭೆಯ ನೋಟೀಸು

ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ ಇದರ ಸನ್ 2023-24ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಸನ್ಮಾನ್ಯ **ಶ್ರೀ ಶಿವಾನಂದ ಎಸ್. ಪಾಟೀಲ**, ಮಾನ್ಯ ಜವಳಿ, ಸಕ್ಕರೆ, ಕಬ್ಬು ಅಭಿವೃದ್ಧಿ ಹಾಗೂ ಕೃಷಿ ಮಾರುಕಟ್ಟೆ ಸಚಿವರು, ಕರ್ನಾಟಕ ಸರಕಾರ ಇವರ ಘನ ಅಧ್ಯಕ್ಷತೆಯಲ್ಲಿ ಶನಿವಾರ ದಿನಾಂಕ: 31-08-2024 ರಂದು ಮುಂಜಾನೆ 11.00 ಘಂಟೆಗೆ **ವಿಜಯಪುರದ ಕಿತ್ತೂರ ಚನ್ನಮ್ಮ ನಗರ, ಸೋಲಾಪೂರ ರಸ್ತೆಯಲ್ಲಿಯ ಬ್ಯಾಂಕಿನ ಆಡಳಿತ ಕಛೇರಿ ಆವರಣದಲ್ಲಿ** ಈ ಕೆಳಗೆ ನಮೂದಿಸಿದ ವಿಷಯಗಳನ್ನು ಚರ್ಚಿಸಲು ಕರೆಯಲಾಗಿದೆ.

ಕಾರಣ ಯಾವತ್ತೂ ಸದಸ್ಯರು ಸಭೆಗೆ ಆಗಮಿಸಲು ಕೋರಿದೆ.

| ಅ.ನಂ. | ವಿಷಯಗಳು |
|---|---|
| 1. | ದಿನಾಂಕ : 22-09-2023ರಂದು ಜರುಗಿದ ಬ್ಯಾಂಕಿನ ಸರ್ವ ಸಾಧಾರಣ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು. |
| 2. | 2023-24ನೇ ಸಾಲಿನ ಬ್ಯಾಂಕಿನ ಆಡಳಿತ ಮಂಡಲಿ ನಿರ್ದೇಶಕರ ವರದಿಯನ್ನು ಪರಿಶೀಲಿಸುವುದು. |
| 3. | 2022-23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಪರಿಶೀಲಿಸಿ ಸೂಕ್ತ ನಿರ್ಣಯ ಕೈಕೊಳ್ಳುವುದು. |
| 4. | ವಿಚಾರಣಾ ವರದಿಗಳಿದ್ದಲ್ಲಿ ಪರಿಶೀಲಿಸುವುದು. |
| 5. | 2023-24ನೇ ಸಾಲಿನ ನಿವ್ವಳ ಲಾಭ ರೂ.20,22,68,847.30 ಗಳನ್ನು ವಿಲೇವಾರಿ ಮಾಡುವುದು ಹಾಗೂ ಸದರ ಸಾಲಿಗೆ ಲಾಭಾಂಶ ಘೋಷಿಸುವುದು. |
| 6. | ನಿರ್ವಹಣಾ ಕೊರತೆಗಳೇನಾದರೂ ಇದ್ದಲ್ಲಿ ಅವಲೋಕಿಸುವುದು ಮತ್ತು ಅಂತಹ ಕೊರತೆಗಳನ್ನು ಕಡಿಮೆಗೊಳಿಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುವುದು. |
| 7. | ಬ್ಯಾಂಕಿನ ಆಡಳಿತ ಮಂಡಲಿಯು 2024-25ನೇ ಸಾಲಿಗಾಗಿ ಹಮ್ಮಿಕೊಂಡಿರುವ ಕಾರ್ಯ ಚಟುವಟಿಕೆಗಳ ಕಾರ್ಯಕ್ರಮವನ್ನು ಅನುಮೋದಿಸುವ ಕುರಿತು. |
| 8. | 2023-24ನೇ ಸಾಲಿನ ಆಯ-ವ್ಯಯವನ್ನು ಅನುಮೋದಿಸುವುದು ಮತ್ತು ಸನ್ 2023-24ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ಆದ ವೆಚ್ಚಗಳನ್ನು ಪರಿಶೀಲಿಸಿ ಮಂಜೂರು ಮಾಡುವುದು. |
| 9. | 2024-25ನೇ ಸಾಲಿನ ಅಂದಾಜು ಆಯ-ವ್ಯಯ ಪತ್ರಿಕೆ ಅಂಗೀಕರಿಸುವುದು. |
| 10. | ನಿರ್ದಿಷ್ಟ ಮೀಸಲು ಹಾಗೂ ಇತರೆ ನಿಧಿಗಳನ್ನು ಸೃಷ್ಟಿಸುವ ಕುರಿತು. |
| 11. | ಅಧೀನ ಸಂಸ್ಥೆಗಳ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳ ಪರಿಶೀಲನೆ. |
| 12. | ಬ್ಯಾಂಕು ಇತರೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಪಡೆದಿರುವುದನ್ನು ಗಮನಿಸಿ, ಅನುಮೋದಿಸುವುದು. |
| 13. | ಬ್ಯಾಂಕಿನ ಸಮಿತಿ ಸದಸ್ಯರುಗಳ ಅಥವಾ ಮುಖ್ಯ ಕಾರ್ಯನಿರ್ವಾಹಕರ ಸಂಬಂಧಿಕರಾಗಿದ್ದು, ಬ್ಯಾಂಕಿನ ನೌಕರರಾಗಿ ನೇಮಕಾತಿಗೊಂಡಿದ್ದಲ್ಲಿ ಅಂತಹ ನೌಕರರ ಪಟ್ಟಿಯನ್ನು ಪರಿಶೀಲಿಸುವುದು. |

| ಅ.ನಂ. | ವಿಷಯಗಳು |
|---|---|
| 14. | ಬ್ಯಾಂಕಿನ ಪೋಟ ನಿಯಮಗಳಿಗೆ ತಿದ್ದುಪಡಿ ಮಾಡುವ ಕುರಿತು ಪರಿಶೀಲಿಸುವುದು. |
| 15. | ಬ್ಯಾಂಕಿನ ಸಮಿತಿ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರ ನೀತಿ ಸಂಹಿತೆ ರೂಪಿಸುವ ಬಗ್ಗೆ. |
| 16. | ಬ್ಯಾಂಕಿನ ಅಧೀಕೃತ ಶೇರ ಬಂಡವಾಳದ ಮಿತಿಯನ್ನು ಗೊತ್ತುಪಡಿಸುವ ಕುರಿತು. |
| 17. | ಬ್ಯಾಂಕಿನ ಸದಸ್ಯತ್ವ ನೀಡಿರುವ ಹಾಗೂ ಸದಸ್ಯತ್ವದಿಂದ ತೆಗೆದು ಹಾಕಿರುವ ಸದಸ್ಯರ ಬಗ್ಗೆ ಪರಿಶೀಲಿಸುವುದು. |
| 18. | 2024-25ನೇ ಸಾಲಿನ ಬ್ಯಾಂಕಿನ ಲೆಕ್ಕ ಪರಿಶೋಧನೆಗಾಗಿ ಲೆಕ್ಕ ಪರಿಶೋಧಕರನ್ನು ನೇಮಿಸುವ ಕುರಿತು. |
| 19. | ಬ್ಯಾಂಕಿನ ಸದಸ್ಯರು ಹಾಗೂ ನಿರ್ದೇಶಕರು ಬ್ಯಾಂಕಿನ ಸೇವೆಯನ್ನು ಪಡೆದ ಬಗ್ಗೆ. |
| 20. | ಬ್ಯಾಂಕಿನ ನಿರ್ದೇಶಕರು ಹಾಗೂ ಅವರ ಸಂಬಂಧಿಕರಿಗೆ ಸಾಲ ನೀಡಿದ್ದು, ಸುಸ್ತಿಯಾಗಿದ್ದಲ್ಲಿ ವಸೂಲಾತಿ ಕುರಿತು ಪರಿಶೀಲಿಸುವುದು. |
| 21. | ಸಂಘಗಳ ಆಸ್ತಿ ಜವಾಬ್ದಾರಿ ವರ್ಗಾವಣೆ, ಕೂಡಿಕೆ ಹಾಗೂ ಪ್ರತ್ಯೇಕಿಸುವ ಕುರಿತು ಪರಿಶೀಲನೆ. |
| 22. | ನಿರ್ದೇಶಕರು ಹಾಗೂ ಪದಾಧಿಕಾರಿಗೆ ಸಭೆಗಳಿಗೆ ಹಾಜರಾದ ಬಗ್ಗೆ ಪ್ರವಾಸ ಭತ್ಯೆ / ದಿನಭತ್ಯೆ ನೀಡಿದ ಕುರಿತು ಪರಿಶೀಲನೆ. |
| 23. | ನಿಧಿಗಳ ಬಳಕೆ ಬಗ್ಗೆ ಪರಿಶೀಲನೆ. |
| 24. | ಸಮಾಪನೆ ಕುರಿತಂತೆ ಪರಿಶೀಲನೆ. |
| 25. | ಅಧ್ಯಕ್ಷರ ಅಪ್ಪಣೆ ಮೇರೆಗೆ ಬಂದ ಇತರ ವಿಷಯಗಳು. |

ಆಡಳಿತ ಮಂಡಲಿ ಅಪ್ಪಣೆಯ ಮೇರೆಗೆ
ಸಹಿ/-
**ಎಸ್.ಡಿ.ಬಿರಾದಾರ**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ಸೂಚನೆ :**

1. ಬ್ಯಾಂಕಿನ ಮಹಾ ಸಭೆಗೆ ಬ್ಯಾಂಕಿನ ಸದಸ್ಯತ್ವ ಹೊಂದಿದ ಸಹಕಾರ ಸಂಘವು ಒಬ್ಬ ಪ್ರತಿನಿಧಿಯನ್ನು ಆರಿಸಿ ಕಳುಹಿಸಬಹುದು ಮತ್ತು ಅಂತಹ ಪ್ರತಿನಿಧಿಯನ್ನು ನಿಯೋಜಿಸಿರುವ ಬಗ್ಗೆ ದೃಢೀಕೃತ ಠರಾವಿನ ಪ್ರತಿಯನ್ನು ಪ್ರತಿನಿಧಿಯ ಜೊತೆಗೆ ಕಳುಹಿಸಬೇಕು, ಪ್ರತಿನಿಧಿಯು ಬ್ಯಾಂಕಿನ ಮಹಾಸಭೆಯ ದಿನಾಂಕಕ್ಕೆ 15 ದಿವಸಕ್ಕಿಂತ ಮುಂಚಿತವಾಗಿ ಸಾಲಗಾರ ನಾತೆಯಿಂದ ಯಾವುದೇ ಸಹಕಾರ ಸಂಘಕ್ಕೆ ಕಟಬಾಕಿ ಆಗಿರತಕ್ಕದ್ದಲ್ಲ ಮತ್ತು ಕಟಬಾಕಿದಾರ ಇಲ್ಲದ ಬಗ್ಗೆ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ಪ್ರಮಾಣ ಪತ್ರ ತರುವುದು.
2. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 20 (ಬಿ)ಯನ್ವಯ ಅರ್ಹತೆ ಹೊಂದಿದ ಸಹಕಾರ ಸಂಘದ ಪ್ರತಿನಿಧಿ ಮಾತ್ರ ಮಹಾ ಸಭೆಯಲ್ಲಿ ಆಗಬಹುದಾದ ವಿಷಯಗಳ ಮೇಲೆ ಮತ ಚಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.
3. ಸಭೆಯಲ್ಲಿ ಮೇಲೆ ಕಾಣಿಸಿದ ವಿಷಯಗಳನ್ನು ಹೊರತುಪಡಿಸಿ ಯಾವುದಾದರೂ ವಿಷಯಗಳನ್ನು ಚರ್ಚಿಸುವದಿದ್ದಲ್ಲಿ ಮಹಾಸಭೆಯ ದಿನಾಂಕಕ್ಕಿಂತ 7 ದಿವಸಗಳ ಮುಂಚಿತವಾಗಿ ಕಳುಹಿಸುವುದು. ಇಂತಹ ವಿಷಯಗಳನ್ನು ಸಭೆಯ ಅಧ್ಯಕ್ಷರ ಅನುಮತಿಗೊಳಪಟ್ಟು ಮಹಾಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು.